ಗಡಿಭಾಗದ ಗ್ರಾಮಗಳಲ್ಲಿ ಅಗತ್ಯ ಸೌಲಭ್ಯಗಳಲ್ಲದಿರುವುದು

529 - ಶ್ರೀ ರಾಮದಾಸ್ ಎ. (ಕೃಷ್ಣರಾಜ) : ಮಾನ್ಯ ಯೋಜನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗಡಿಭಾಗದ ಗ್ರಾಮಗಳಲ್ಲಿ ಅಗತ್ಯ ಸೌಲಭ್ಯಗಳಿಲ್ಲದೇ ಅಲ್ಲಿನ ಗ್ರಾಮಸ್ಥರು ತಮ್ಮ ಹಳ್ಳಿಗಳನ್ನು ಪಕ್ಕದ ರಾಜ್ಯಗಳಿಗೆ ಸೇರಿಸಲು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಆ ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆ ಏನಾದರೂ ರೂಪಿಸಿದೆಯೇ (ವಿವರ ನೀಡುವುದು)

ಇ) ಚಾಮರಾಜನಗರ-ತಮಿಳುನಾಡು ಗಡಿಭಾಗದ ಗ್ರಾಮಗಳಿಗೆ ಸರ್ಕಾರದ ಯೋಜನೆಗಳೇನು?

ಶ್ರೀಮತಿ ಸುಮ ವಸಂತ (ಯೋಜನಾ ಮತ್ತು ಹೆಚ್‌ಕೆಡಿಬಿ ರಾಜ್ಯ ಸಚಿವರು) :

ಅ) ಇಲ್ಲ.

ಆ) ಗಡಿ ತಾಲ್ಲೂಕುಗಳ ಅಭಿವೃದ್ಧಿಗಾಗಿ ಗಡಿಪ್ರದೇಶಾಭಿವೃದ್ಧಿ ಯೋಜನೆಯನ್ನು 1999-92 ರಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) 1999-2000ರಲ್ಲಿ 5.18 ಲಕ್ಷ ರೂ.ಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳು, ಚಾಮರಾಜನಗರ ಇವರಿಗೆ ಬಿಡುಗಡೆ ಮಾಡಲಾಗಿದೆ.

ಮನೆ ಮತ್ತು ನಿವೇಶನ ಮಂಜೂರಾತಿ

530 - ಶ್ರೀ. ರಾಮದಾಸ್. ಎ (ಕೃಷ್ಣರಾಜ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದೆಯವಿಟ್ಟು ಉತ್ತರಿಸುರೆ?

ಅ. ರಾಜ್ಯದಲ್ಲಿ ಕರ್ನಾಟಕ ಗೃಹ ಮಂಡಳಿಯ ಹಂಚಿಕೆ ಮಾಡದೇ ಇರುವ ಮನೆಗಳ ಹಾಗೂ ನಿವೇಶನಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ. ಈ ಮನೆಗಳನ್ನು ಕಟ್ಟಿರುವುದು ಎಂದು

ಇ. ಮನೆಗಳನ್ನು ಮಾರಾಟ ಮಾಡದೇ ಇರಲು ಕಾರಣಗಳೇನು?

ಈ. ಮಾರಾಟ ಮಾಡಿದ ಮನೆಗಳನ್ನು ಸ್ವಾಧೀನ ನೀಡದೆ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? ಹಾಗೂ ಸ್ವಾಧೀನ ನೀಡದಿರಲು ಕಾರಣವವೇನು?